ಪ್ರಯೋಜನದ ದೃಷ್ಟಿಯಿಂದಲೇ ಸುಖವನ್ನು ಅರಸುವವರಾದರೆ, ಅವರವರಿಗೆ ಪ್ರಿಯವಾದ ಮಾರ್ಗದಲ್ಲಿ ಸಾಗಬೇಕು; ಪ್ರಪಂಚವೆಲ್ಲ ನನ್ನಹಾಗೆ ಇರಲಿ ಎಂದು ನಿರೀಕ್ಷಿಸಬಾರದು. ಪ್ರಪಂಚವನ್ನೆಲ್ಲ ನಮ್ಮ ದೃಷ್ಟಿಯಿಂದಲೇ ಪರೀಕ್ಷಿಸಿ, ನಮ್ಮ ದೃಷ್ಟಿಗೇ ಸೆಳೆಯಲು ಹವಣಿಸಬಾರದು. ಹಾಗೆ ಮಾಡಿದರೆ ಅದು ಘರ್ಷಣೆಗೆ ಎಡೆಯಾಗಬಹುದು. " 'ನೀನು ಹೀಗೆಯೇ ಮಾಡಬೇಕು, ಇಲ್ಲದಿದ್ದರೆ ನೀನೊಬ್ಬ ಮೂರ್ಖ' ಎಂದು ಯಾರಾದರೂ ನನಗೆ ಹೇಳಿದರೆ ಆಗ ನಾನು 'ಇಲ್ಲ, ನೀನು ತಪ್ಪು ತಿಳಿದುಕೊಂಡಿದ್ದೀಯೆ, ನಿನಗೆ ಯಾವುದು ಸುಖದಾಯಕವೋ ಅದರ ಮೇಲೆ ನನಗೆ ಸ್ವಲ್ಪವೂ ಪ್ರೀತಿಯಿಲ್ಲ. ಸ್ವಲ್ಪ ಹಣಕ್ಕಾಗಿ ಜೀವನವನ್ನು ವ್ಯರ್ಥ ಮಾಡುವುದಾದರೆ ಅದಕ್ಕಿಂತ ಮರಣವೇ ಲೇಸು ಎಂದು ಹೇಳುತ್ತೇನೆ" ಎಂದು ಸ್ವಾಮಿ ವಿವೇಕಾನಂದರು ಈ ದೃಷ್ಟಾಂತದ ಮುಕ್ತಾಯದಲ್ಲಿ ಸಾರ್ಥಕವಾಗಿ ನುಡಿದಿದ್ದಾರೆ.

# ಜಪಾನಿನ ಕಥೆಗಳು



## ಏಡಿಗಳ ಓಟ

ಬಹಳ ದಿನಗಳ ಹಿಂದೆ, ನೀಲ ಸಮುದ್ರದ ಅಂಚಿನಲ್ಲಿ ಏಡಿಗಳ ಒಂದು ಬಹು ದೊಡ್ಡ ಸಂಸಾರ ಇತ್ತು. ತಾಯಿ ಏಡಿಗೆ ಮನೆ ತುಂಬಾ ಮಕ್ಕಳು. ಹೆಣ್ಣುಮಕ್ಕಳು, ಗಂಡುಮಕ್ಕಳು – ಇಬ್ಬರೂ ಇದ್ದರು. ಸಮುದ್ರತೀರದಲ್ಲಿದ್ದ ಕಲ್ಲುಬಂಡೆಗಳ ನಡುವೆಯೇ ಅವುಗಳ ಮನೆ. ತಾಯಿಗೆ ತನ್ನ ಮಕ್ಕಳೊಂದಿಗೆ ಆಟವಾಡುವುದರಲ್ಲಿಯೇ ದಿನ ಕಳೆದು ಹೋಗುತ್ತಿತ್ತು. ಒಂದು ದಿನ ಬೆಳಗಿನ ಉಪಹಾರದ ನಂತರ ತಾಯಿ ಏಡಿ ಬಿಸಿಲು ಕಾಯಿಸಿಕೊಳ್ಳುತ್ತ ಕುಳಿತಿತ್ತು. ಮಕ್ಕಳೂ ತಮಗೆ ತೋಚಿದಂತೆ ಆಟವಾಡಿಕೊಳ್ಳುತ್ತಿದ್ದವು. ಇದೇ ವೇಳೆಯಲ್ಲಿ ಸ್ವಲ್ಪ ದೂರದಲ್ಲಿ ಕೆಲವರು ಹುಡುಗರು ಸಮುದ್ರದ ನೀರಿನಲ್ಲಿ ಆಟವಾಡುತ್ತಿದ್ದರು. ಇವರ ಆಟ ಬಹಳ ರಂಜನೀಯವಾಗಿತ್ತು. ಹುಡುಗರು ಓಡೋಡುತ್ತಾ ಬಂದು ಸಮುದ್ರದ ನೀರಿನ ಅಲೆಗಳಲ್ಲಿ ಧುಮುಕುತ್ತಿದ್ದರು. ಅಲೆಗಳಲ್ಲಿ ಎಗರಿ ಧುಮುಕಿ ಈಜಾಡಿ ಆಟವಾಡುತ್ತಿದ್ದು, ನೀರಿನಿಂದ ಹೊರಬರುತ್ತಿದ್ದರು. ಮತ್ತೆ ಮರಳದಂಡೆಯಲ್ಲಿ ದೂರಕ್ಕೆ ಓಡಿಹೋಗಿ ಪುನಃ ಓಡೋಡುತ್ತ ಬಂದು ನೀರಿನ ಅಲೆಗಳ ಮೇಲೆ ಧುಮುಕುತ್ತಿದ್ದರು. ಮತ್ತೆ ಮತ್ತೆ ಹೀಗೆಯೇ ಮಾಡುತ್ತಿದ್ದರು. ಹೀಗೆ ನೀರಿಗೆ ಧುಮುಕುವುದು, ಆಟವಾಡುವುದು, ನೀರಿನ ಚಿಮ್ಮುವಿಕೆಯಿಂದ ಆಗುತ್ತಿದ್ದ ಅಲ್ಲೋಲಕಲ್ಲೋಲ, ಹುಡುಗರ ಆನಂದದ ಕೂಗಾಟ – ಇವೆಲ್ಲವೂ ದೂರದಿಂದ ಬಹಳ ಆಕರ್ಷಣೀಯವಾಗಿ ಕಾಣಿಸುತ್ತಿತ್ತು. "ಈ ನೀರಿನ ಆಟವಂತೂ ಬಹಳ ಸೊಗಸಾಗಿದೆ. ತುಂಬಾ ತಮಾಷೆಯಾಗಿಯೂ ಇದೆ. ನಾನೂ ಸಹ ನನ್ನ ಮಕ್ಕಳೊಂದಿಗೆ ಈ ರೀತಿ ಆಟ ಆಡುವುದು ಸಾಧ್ಯವಾದರೆ ಎಷ್ಟು ಚೆನ್ನಾಗಿರುತ್ತದೆ" ಎಂದು ತಾಯಿ ಏಡಿ ಆಲೋಚಿಸಿತು. ಆ ಕೂಡಲೇ ತನ್ನ ಮಕ್ಕಳನ್ನೆಲ್ಲ ಕರೆದು ಹೀಗೆ ಹೇಳಿತು: "ಇಲ್ಲಿ ಕೇಳಿ ಮಕ್ಕಳೇ, ಗಮನಕೊಟ್ಟು ಸರಿಯಾಗಿ ಕೇಳಿಸಿಕೊಳ್ಳಿ. ನಾನು ನಿಮಗೆ ತುಂಬ ತಮಾಷೆಯ ಒಂದು ಆಟ ಹೇಳಿಕೊಡುತ್ತೇನೆ. ಈ ಆಟದಿಂದ ನಿಮಗೆಲ್ಲರಿಗೂ ತುಂಬಾ ಸಂತೋಷವಾಗುತ್ತದೆ." ಹೀಗೆ ಹೇಳಿ ತಾಯಿ ಏಡಿ ತನ್ನ ಮಕ್ಕಳಿಗೆ ಆಟದ ವಿವರಗಳನ್ನೆಲ್ಲ ಚೆನ್ನಾಗಿ ಅರ್ಥವಾಗುವಂತೆ ವಿವರಿಸಿ ತಿಳಿಸಿತು. ಅನಂತರ ಮಕ್ಕಳನ್ನೆಲ್ಲ ಸಾಲಾಗಿ ನಿಲ್ಲಿಸಿ ತಾನೂ ಅವರೊಂದಿಗೇ ನಿಂತಿತು. **ರೆಡಿ, ಸ್ಟೆಡಿ, ಗೋ** ಎಂದು ಹೇಳುತ್ತಲೇ, ಏಡಿಗಳೆಲ್ಲವೂ ಚಲಿಸಲು ಪ್ರಾರಂಭಿಸಿದವು. ಆದರೆ ಅವು ಒಂದು ಆಶ್ಚರ್ಯದ ಸಂಗತಿಯನ್ನು ಗಮನಿಸಿದವು. ಎಷ್ಟೇ ವೇಗವಾಗಿ ಚಲಿಸಿದರೂ ಅವುಗಳಿಗೆ ಸಮುದ್ರದ ನೀರಿನ ಸಮೀಪಕ್ಕೆ ಬರುವುದು ಸಾಧ್ಯವಾಗಲೇ ಇಲ್ಲ ! ಎಷ್ಟೇ ಶ್ರಮವಹಿಸಿ ಪ್ರಯತ್ನಿಸಿದರೂ ಸಮುದ್ರಕ್ಕೆ ಧುಮುಕುವುದು ಸಾಧ್ಯವಾಗದೆ, ಅವುಗಳಿಗೆ ಮೇಲುಸಿರು ಬರತೊಡಗಿತು. ಬಹಳವಾಗಿ ದಣಿದುಹೋದ ಮಕ್ಕಳು ತಾಯಿಯನ್ನು ಪ್ರಶ್ನಿಸಿದವು, "ಅಮ್ಮಾ, ನಮಗೆ ಸಮುದ್ರದ ಕಡೆಗೆ ಮುಂದುವರೆಯುದಕ್ಕೇ ಆಗುತ್ತಿಲ್ಲವಲ್ಲಾ. ಸಮುದ್ರದಿಂದ ಬಹಳ ದೂರದಲ್ಲಿಯೇ ಉಳಿದುಬಿಟ್ಟಿದ್ದೇವೆ. ಇದರ ಕಾರಣವೇನೊ ತಿಳಿಯುತ್ತಿಲ್ಲ." ತಾಯಿ ಏಡಿಗೆ ಆ ಕ್ಷಣದಲ್ಲಿಯೇ ಇದರ ರಹಸ್ಯ ಮತ್ತು ನಿಜವಾದ ಕಾರಣ ತಿಳಿದುಹೋಯಿತು. ಏಡಿಗಳಿಗೆ ಮುಂದು ಮುಂದಕ್ಕೆ ಚಲಿಸುವುದು ಆಗದು. ಅವು ಕೇವಲ ಪಕ್ಕಕ್ಕೆ ಮಾತ್ರ ಚಲಿಸುತ್ತವೆ. ಆದ್ದರಿಂದ ಅವು ಸಾಲಾಗಿ ಪಕ್ಕಕ್ಕೆ ಮಾತ್ರ ಚಲಿಸುತ್ತಿದ್ದವು. ಸಮುದ್ರದ ಕಡೆಗೆ ಮುಂದುವರಿದು ಚಲಿಸುವುದು ಅವುಗಳಿಗೆ ಸಾಧ್ಯವಾಗುತ್ತಿರಲಿಲ್ಲ ! ಹೀಗಾಗಿ ಸಮುದ್ರದ ನೀರಿನ ಅಲೆಗಳಲ್ಲಿ ಧುಮುಕುತ್ತಾ, ಈಜಾಡಿ ಆಟವಾಡುವುದು ತಾಯಿ ಏಡಿಯ ಪಾಲಿಗೆ ಸ್ವಪ್ನವಾಗಿಯೇ ಹೋಯಿತು.

(**ಬಂಗಾಳಿ ಮೂಲ:** *ರಾಜಕೃಷ್ಣ ಭಟ್ಟಾಚಾರ್ಯ*, **ಚಿತ್ರ :** *ಜುಂಕೋ ಭಟ್ಟಾಚಾರ್ಯ*, **ಕನ್ನಡಾನುವಾದ :** ಗಿರಿಜಾದೇವಿ)


# ತಾಮಾಜಿ ಪಂಡಿತ

**ಕಥೆ :** ಟಿ. ಪದ್ಮನಾಭನ್ ಮತ್ತು ಶರಣ್ಯ **ಚಿತ್ರ :** ಪದ್ಮಾವಾಸನ್


**1** ತಾಮಾಜಿ ಪಂಡಿತರು ತಮ್ಮ ಸದ್ಗುಣಗಳು, ಭಕ್ತಿ ಮತ್ತು ನ್ಯಾಯಪರತೆಗಳಿಗಾಗಿ ಪ್ರಸಿದ್ಧರಾಗಿದ್ದರು. ಇದನ್ನು ನೋಡಿ ರಾಜನು ಅವರನ್ನು ಮಂಗಲವಾಡಿ ಎನ್ನುವ ಗ್ರಾಮದ ಮುಖ್ಯಸ್ಥರನ್ನಾಗಿ ನೇಮಿಸಿದನು. ಅದು ಬಹಳ ಸಂಪದ್ಭರಿತವಾದ ಹಳ್ಳಿಯಾಗಿತ್ತು.




**2** ಒಂದು ಸಲ ಆ ಹಳ್ಳಿಗೆ ಭೀಕರ ಬರ ಕಾಡಿತು. ಜನರು ಬಹಳ ಕಷ್ಟದಲ್ಲಿ ಸಿಲುಕಿದರು.





**3** ಅತಿಥಿಯು ಹೊಟ್ಟೆತುಂಬ ಊಟಮಾಡಿದನು.





**4** ಇದನ್ನು ಕೇಳಿತಿಳಿದ ಗ್ರಾಮಸ್ಥರು ಬತ್ತ ತುಂಬಿದ ಗಾಡಿಯನ್ನು ನಿಲ್ಲಿಸಿದರು. ಎಲ್ಲ ಬತ್ತವನ್ನೂ ವಾಪಸ್ಸು ತಂದರು.



**5** ಸುತ್ತಮುತ್ತಲ ಗ್ರಾಮಗಳಲ್ಲಿಯೂ ಅತಿ ದಾರುಣ ಕ್ಷಾಮ ಹರಡಿತ್ತು. ಈ ಗ್ರಾಮದಲ್ಲಿ ನಡೆದದ್ದನ್ನು ಕೇಳಿ, ಇತರ ಗ್ರಾಮಗಳ ಜನ ಗುಂಪುಗುಂಪಾಗಿ ತಾಮಾಜಿ ಪಂಡಿತರ ಹತ್ತಿರ ಬರಲಾರಂಭಿಸಿದರು.






**7** ಇಡೀ ರಾಜ್ಯದಲ್ಲಿ ತಾಮಾಜಿ ಪಂಡಿತರ ಔದಾರ್ಯದ ಸುದ್ದಿ ಹರಡಿತು. ಎಲ್ಲರೂ ಅವರನ್ನು ಹೊಗಳಿದರು. ಆದರೆ ರಾಜನು ಈ ಸುದ್ದಿ ತಿಳಿದು ಬಹಳ ಕೋಪಗೊಂಡನು.




**8** ಸೈನಿಕರು ಪಂಡಿತರನ್ನು ಸೆರೆಹಿಡಿಯಲು ಬಂದರು.



**9** ಸೈನಿಕರು ಪಂಡಿತರ ಕೈಗಳಿಗೆ ಬೇಡಿ ತೊಡಿಸಿ, ರಾಜನ ಹತ್ತಿರ ಕರೆದುಕೊಂಡು ಹೋಗುತ್ತಿದ್ದರು.




**10** ಪಾಂಡುರಂಗನ ಸಾನ್ನಿಧ್ಯದ ಎದುರಿಗೆ...




**11** ಇದೇ ಸಮಯದಲ್ಲಿ ರಾಜನ ಸಭೆಯಲ್ಲಿ ಒಬ್ಬ ಯುವಕನು ಕಾಣಿಸಿಕೊಂಡನು. ಅವನಿಗೆ ಭಯಂಕರವಾದ ಮೀಸೆಯಿತ್ತು. ಅವನು ಕಂಬಳಿಯಲ್ಲಿ ಸುತ್ತಿದ ಗಂಟೊಂದನ್ನು ಹಿಡಿದುಕೊಂಡಿದ್ದನು. ಅವನು ನೋಡಲು ಖಳನಂತೆ ಕಾಣುತ್ತಿದ್ದನು.

